- -                                        ಓ ಎಸ್ ನಂ.85/2023

ಪಿ .ಡಬ್ಲ್ಯೂ :1

ದಿನಾಂಕ :18-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು: **1** ನೇ ಪ್ರತಿವಾದಿ ಪರ ವೈ ಟಿ ವಕೀಲರಿಂದ:

ಪ್ರಸ್ತುತ ನಾನು ತುಮಕೂರಿನ ದಿಬ್ಬೂರಿನಲ್ಲಿ ವಾಸವಿದ್ದೇನೆ . ಸುಮಾರು 20 ವರ್ಷಗಳಿಂದಲೂ ವಾಸವಿದ್ದೇನೆ . ರಾಮಯ್ಯ ನನ್ನ ಗಂಡ . ಈ ದಾವೆಯಲ್ಲಿ ಏನು ಪರಿಹಾರ ಕೋರಿದ್ದೀರಿ ಎಂದರೆ ಸಾಕ್ಷಿಯು ಇದು ನಮ್ಮ ಜಮೀನು ನಮಗೆ ಸೇರಬೇಕು ಎಂದು ಕೋರಿದ್ದೇನೆ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತಿನ ಹಳೆ ಸರ್ವೆ ನಂ. 57 ಹೊಸ ಸರ್ವೆ ನಂ. 57/2 ಆಗಿದೆ . ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ- ಬ್ಲಾಕ್ ನಂ 2 ರವರ ಸ್ವತ್ತು ಪಶ್ಚಿಮಕ್ಕೆ ಬ್ಲಾಕ್ ನಂ 4 ರವರ ಸ್ವತ್ತು ಉತ್ತರಕ್ಕೆ 58 ನೇ ನಂಬರ್ ರಸ್ತೆ . ದಕ್ಷಿಣಕ್ಕೆ ಬ್ಲಾಕ್ ನಂ 1 ರವರ ಸ್ವತ್ತು. ದಾವಾ ಸ್ವತ್ತು 1994 ನೇ ಸಾಲಿನಲ್ಲಿ ಮಂಜೂರಾಗಿತ್ತು . ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮಂಜೂರಾತಿ ಪತ್ರ ಹಾಜರುಪಡಿಸಿದ್ದೇನೆ . 1994 ನೇ ಸಾಲಿನಿಂದ ನಾವು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಉಳುಮೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1978 ನೇ ಸಾಲಿನಲ್ಲಿ 1 ನೇ ಪ್ರತಿವಾದಿಗೆ ಮಂಜೂರಾಗಿದ್ದ ಸ್ವತ್ತಿನ ಚಕ್ಕುಬಂದಿಯನ್ನು ನಮೂದಿಸಿ ಮಂಜೂರಾತಿ ಪಡೆದಿದ್ದೇವೆ ಎಂದರೆ ಸರಿಯಲ್ಲ.

ಸರ್ವೆ ನಂ. 57 ರಲ್ಲಿ ಸರ್ಕಾರಕ್ಕೆ 50 ಎಕರೆಗಿಂತಲೂ ಹೆಚ್ಚಿನ ವಿಸ್ತೀರ್ಣದ ಸ್ವತ್ತು ಇದೆ ಎಂದರೆ ಸಾಕ್ಷಿಯು ಒಟ್ಟು 30 ಎಕರೆ 23 ಗುಂಟೆ ವಿಸ್ತೀರ್ಣದ ಸ್ವತ್ತು ಇದೆ , ಅದರಲ್ಲಿ 3 ಎಕರೆ 20 ಗುಂಟೆ ನಮಗೆ ಸೇರಿದೆ ಎಂದು ತಿಳಿಸಿದ್ದಾರೆ . ನಾನು ಹೇಳಿದ ಎಕರೆ 20 ಗುಂಟೆ ಸ್ವತ್ತು 1 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನಿಂದ 1 ಕಿಲೋ ಮೀಟರ್ ದೂರದಲ್ಲಿದೆ ಇಂದಿಗೂ ಸಹಾ ಇದು ಖಾಲಿ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನ ಹೊಂದಿಲ್ಲದ ಕಾರಣ ಚಕ್ಕುಬಂದಿ ಹೇಳಲು ಗೊತ್ತಾಗುತ್ತಿಲ್ಲ ಎಂದರೆ ಸರಿಯಲ್ಲ. 1978 ನೇ ಸಾಲಿನಿಂದಲೂ 1 ನೇ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನ ದಲ್ಲಿದ್ದು ನನ್ನ ವಿರುದ್ಧ ನ್ಯಾಯಾಲಯದಲ್ಲಿ ಶಾಶ್ವತ ನಿರ್ಭಂದಕಾಜ್ಞೆ ಆದೇಶ ಸಹಾ ಪಡೆದಿದ್ದಾರೆ ಎಂದರೆ ಸರಿಯಲ್ಲ . 2006 ನೇ ಸಾಲಿನಲ್ಲಿ ನಾನು 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿದ ಕಾರಣ ಅವರು ನನ್ನ ವಿರುದ್ಧ ಓ ಎಸ್ ನಂ . 97/2007 ರಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ . ನಾನು ಸದರಿ ದಾವೆಯಲ್ಲಿ ವಕೀಲರನ್ನು

ನೇಮಿಸಿಕೊಂಡು ದಾವೆ ನಡೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ದಿಃ 24-02-2008 ರಂದು ನ್ಯಾಯಾಲಯವು ಶಾಶ್ವತ ನಿರ್ಭಂದಕಾಜ್ಞೆ ಆದೇಶ ನೀಡಿತ್ತು ಎಂದರೆ ಸರಿಯಲ್ಲ. ಆ ನಂತರ ಪೊಲೀಸ್ ಠಾಣೆಗೂ ಸಹಾ ಹೋಗಿದ್ದು ಠಾಣೆಯಲ್ಲಿ 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆ ನೀಡುವುದಿಲ್ಲವೆಂದು ಬರೆದುಕೊಟ್ಟಿದ್ದಿರಿ ಎಂದರೆ ಸಾಕ್ಷಿಯು ಪ್ರತಿವಾದಿಗಳು ನಮಗೆ ಸ್ವತಿನ ಬಳಿ ಹೋಗದೆ ತೊಂದರೆ ನೀಡುತ್ತಿದ್ದರು, ಆ ಕಾರಣ ಠಾಣೆಗೆ ಹೋಗಿದ್ದೆವು ಎಂದು ತಿಳಿಸಿದ್ದಾರೆ . 1 ನೇ ಪ್ರತಿವಾದಿ ಮತ್ತು ಅವರ ಸಹೋದರರು ಅಭಿವೃದ್ಧಿಪಡಿಸಿದ್ದ ಸ್ವತ್ತಿನಲ್ಲಿ ತೆಂಗಿನ ಕಾಯಿಗಳನ್ನು ಕೀಳಲು ನಾವು ಹೋಗಿದ್ದೆವು ಎಂದರೆ ಸರಿಯಲ್ಲ. ನಾವು ಕಾಯಿಗಳನ್ನು ಕಿತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ .ನಾನು ಬೇರೆ ಸ್ವತ್ತಿನ ಚಕ್ಕುಬಂದಿಯ ಸ್ವಾಧೀನದಲ್ಲಿದ್ದರೂ ಸಹಾ 1 ನೇ ಪ್ರತಿವಾದಿಯ ಸ್ವತ್ತಿನ ಚಕ್ಕುಬಂದಿಯನ್ನು ನಮೂದಿಸಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವ ಸ್ವತ್ತಿನ ಚಕ್ಕುಬಂದಿಯ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ಇಂದಿಗೂ ಸಹಾ ಹುಡುಕಿಕೊಳ್ಳಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ . ಸ್ವತ್ತಿನ ಸ್ವಾಧೀನ ಪತ್ರವನ್ನು ಸಲ್ಲಿಸದೆ ಮಂಜೂರಾತಿ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ. ಸ್ವತ್ತಿನ ಸ್ವಾಧೀನಕ್ಕೆ ಸಂಬಂಧಿಸಿ ವಿ ಎ ಮತ್ತು ಆರ್ ಐ ರವರು ಸ್ವತ್ತಿನ ಸ್ವಾಧೀನ ಪತ್ರವನ್ನು ಮತ್ತು ನಕ್ಷೆಯನ್ನು ನೀಡುತ್ತಾರೆ ಅದನ್ನು ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ಅಂತಹ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ . ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹಾ 1 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಅವರ ಸ್ವತ್ತಿನ ಚಕ್ಕುಬಂದಿಯನ್ನು ತೋರಿಸಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .